# ಕಂಪು ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಯುಗಾದಿ ಸಂಚಿಕೆ

ಸಂಪುಟ 3 ಸಂಚಿಕೆ 2

Newsletter of MKANT
Yugadi 2013

www.mallige.org


## ಈ ಸಂಚಿಕೆಯಲ್ಲಿ


| | |
|---|---|
| ರಾಜ್ಯೋತ್ಸವ ವರದಿ | 1 |
| ಪ್ರತಿಭಾ ಪ್ರದರ್ಶನ | 4 |
| ಅಧ್ಯಕ್ಷರ ಸಂದೇಶ | 5 |
| ವಿಜಯನ ದಾಪುಗಾಲು | 6 |
| ನಗೆಹೊನಲು | 7 |
| ಕನ್ನಡ ಕೈಬರಹ | 8 |
| Spring | 9 |
| My Frist Tooth | 10 |
| Drawing | 11 |
| ಪ್ರತಿಕ್ರಿಯೆ | 12 |
| ಪಾಕಂಪಪ್ಪು | 13 |


# ಕನ್ನಡ ರಾಜ್ಯೋತ್ಸವ 2012 ವರದಿ


- ಗಾಯತ್ರಿ ಸುಬ್ಬುಕೃಷ್ಣ




**ನವೆಂಬರ್ 4.,** ಭಾನುವಾರ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ Grand Theater ಸಭಾಂಗಣದಲ್ಲಿ ಬಹಳ ಅದ್ದೂರಿಯಾಗಿ ಶುರುವಾಯಿತು. ಸಭಾಂಗಣದಲ್ಲಿ ಕಾಲಿಡುತ್ತಿದ್ದಂತೆಯೇ ಕನ್ನಡದ ಕಂಪು ಪಸರಿಸಿತ್ತು. ಅದೇ ಮಲ್ಲಿಗೆ ಕನ್ನಡದ "ಕಂಪು" ಪುಸ್ತಕ. ಎಲ್ಲರ ಕೈ ಸೇರಿ ಮನಃ ಸಂತೋಷ ಪಡಿಸಿತು.ಇದಕ್ಕಾಗಿ ಕಾರ್ಯಕಾರಿ ಸಮಿತಿ ತುಂಬಾ ಶ್ರಮ ವಹಿಸಿ ಪುಸ್ತಕ ಬಿಡುಗಡೆಗೆ ಕಾರಣ ಕರ್ತರಾಗಿದ್ದಾರೆ. ಎಲ್ಲರಿಗೂ ಸವಿಯಾದ ಬೋಂಡ, ಕಾಫಿ, ಟೀ ವಿತರಣೆ ಆಯಿತು.

ಮೊದಲನೆಯದಾಗಿ, ಶ್ರೀಮತಿ ರೂಪ ಗೌಡರ ಸ್ವಾಗತ ಭಾಷಣ. ತುಂಬಾ ಹೃತ್ಪೂರ್ವಕವಾಗಿ ಸಭಿಕರನ್ನು ಸ್ವಾಗತಿಸಿದರು ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೂ ಶುಭಾಶಯ ಕೋರಿದರು.

ಶ್ರೀಮತಿ ಸುಷ್ಮ ಅನಿಲ್ ಕಾರ್ಯಕ್ರಮಗಳ ನಿರೂಪಣೆಯನ್ನು ತುಂಬಾ ಚೆನ್ನಾಗಿ ನಡೆಸಿಕೊಟ್ಟರು. ಮಧ್ಯೆ ಮಧ್ಯೆ ಸಭಿಕರಿಗೆ ಒಗಟು ಬಿಡಿಸುವ ಕೆಲಸನ್ನು ಕೊಟ್ಟು ಮನರಂಜಿಸಿದರು.

ನಂತರ ಎಲ್ಲ ಕಾರ್ಯಕ್ರಮಗಳೂ ಸುಲಲಿತವಾಗಿ ನಡೆಸಿಕೊಡುವಂತೆ ವಿಘ್ನವಿನಾಯಕನ ಪ್ರಾರ್ಥನೆಯನ್ನು ಕು. ಅನು ಮತ್ತು ಕು. ಅರ್ಚನ ಸುಶ್ರಾವ್ಯವಾಗಿ ಹಾಡಿದರು.

ಶ್ರೀಮತಿ ವಿಜಯ ವತ್ಸ ಮತ್ತು ಶ್ರೀಮತಿ ನಿರುಪಮ ಬಲ್ಲಾಳ್ ನಿರ್ದೇಶನದಲ್ಲಿ ಚಿಣ್ಣರು ಇಂಗ್ಲಿಷ್ ಇಂದ ಕನ್ನಡಕ್ಕೆ ಅನುವಾದಿಸಿದ ಪದ್ಯಗಳಿಗೆ ನೃತ್ಯ ಮಾಡಿದ್ದು ತುಂಬಾ ಮುದ್ದಾಗಿ ಮೂಡಿಬಂತು.



ಶ್ರೀಮತಿ ಸಹನಾ ಸುನಿಲ್ ಅವರ ನಿರೂಪಣೆಯಲ್ಲಿ "ಜಯ ಭಾರತ ಜನನಿಯ ತನುಜಾತೆ" ಎಂಬ ಹಾಡಿಗೆ ಪುಟ್ಟ ಮಕ್ಕಳು ಕನ್ನಡದ ಬಾವುಟ ಹಿಡಿದು ಕನ್ನಡಾಂಬೆಗೆ ಪುಷ್ಪಾರ್ಪಣೆ ಮಾಡಿದ ನಂತರ, ಪಂಜಾಬಿ, ಕೊಡವ, ಮಹಾರಾಷ್ಟ್ರ, ಲಂಗಾದಾವಣಿ, ಮತ್ತು ಹಳ್ಳಿ ಅಲಂಕಾರದಲ್ಲಿ, ವೇಷಕ್ಕೆ ತಕ್ಕ ಚಿತ್ರ ಗೀತೆಗಳಿಗೆ ಮಾಡಿದ ನೃತ್ಯ ಬಹಳ ಮನೋಹರವಾಗಿತ್ತು.Inspiration to Integration " ಎನ್ನುವ theme ಬಹಳ ಹೊಂದುತ್ತಿತ್ತು.



ಕನ್ನಡದ ಪ್ರತಿಭಾವಂತ ಗಣ್ಯಾತಿಗಣ್ಯರ ಪರಿಚಯ ಮಾಡಿಸಿಕೊಡುವ ಕಾರ್ಯಕ್ರಮ - ವಿನೂತನ ಶೈಲಿಯಲ್ಲಿ ಸಭಿಕರನ್ನು ಪ್ರಶ್ನಿಸಿ, ಕುತೂಹಲ ಮೂಡಿಸಿ, ಮಕ್ಕಳಿಗೆ ಸುಧಾ ಮೂರ್ತಿ, ಕಾರಿಯಪ್ಪ, ಚಂದ್ರಶೇಖರ ಕಂಬಾರ, ಡಾ. ಮೋದಿ, ಗಂಗೂಬಾಯಿ ಹಾನಗಲ್, ನಾರಾಯಣ ಮೂರ್ತಿ ಅವರ ಅಲಂಕಾರ ಮಾಡಿ, ಅವರೆಲ್ಲರ ಸಾಧನೆಯ ಬಗ್ಗೆ ಪರಿಚಯಿಸಿದವರು ಶ್ರೀಮತಿ ಪೂರ್ಣಿಮಾ ನಿಖಿಲ್ ಹಾಗು ಅನುಪಮ ವಿಶ್ವನಾಥ್.

ಜಾನಪದ ಸೊಗಡಿನಲ್ಲಿ ಶ್ರೀ ಚಾಮುಂಡೇಶ್ವರಿಯ ಮೇಲೆ "ನೋಡವಳಂದಾವಾ ಮೊಗ್ಗಿನ ಮಾಲೆ ಚೆಂದಾವ" ಎಂಬ ನೃತ್ಯ ರೂಪಕವನ್ನು ಶ್ರೀಮತಿ. ಭಾರತಿ ಚೆನಾಲ್ ಮತ್ತು ಶ್ರೀಮತಿ ರೂಪ ಗೌಡ ಅವರು ಪ್ರಸ್ತುತ ಪಡಿಸಿದರು. ಮಕ್ಕಳನ್ನು ಚೆನ್ನಾಗಿ ತಯಾರಿಮಾಡಿದ್ದರು.

ಅರಳು ಮಲ್ಲಿಗೆ ಕನ್ನಡ ಶಾಲೆಯ ಮಕ್ಕಳು ಕವಿ ನಿಸಾರ್ ಅಹಮದ್ ಅವರ ರಚನೆಯ "ಕನ್ನಡವೆಂದರೆ ಬರಿ ನುಡಿಯಲ್ಲ" ಎಂಬ ಗೀತೆಯನ್ನು ಹಾಡಿದರು. ಮೈಸೂರ್ ಪೇಟ ಧರಿಸಿ, ಜರಿಯ ಪಂಚೆ ಉಟ್ಟು ಶಲ್ಯ ಹೊದ್ದ ಗಂಡು ಮಕ್ಕಳು, ಸೀರೆ ಉಟ್ಟ ಕನ್ಯಾಮಣಿ ಯರು ಕರ್ನಾಟಕದ ಗರಿಮೆ ಹಿರಿಮೆ, ಪ್ರಕೃತಿ ಸೌಂದರ್ಯವನ್ನು ಹಾಡಿನಲ್ಲಿ ತುಂಬಾ ಸೊಗಸಾಗಿ, ಶ್ರೀಯುತ ಉಮಾನಾಥ್ ಅವರ ತಬಲದ ತಾಳಕ್ಕೆ ಸರಿಯಾಗಿ ಹಾಡಿದರು. ಇದಕ್ಕೆ ಶ್ರೀಮತಿ ಅಶ್ವಿನಿ ವೈದ್ಯ ಮತ್ತು ಶ್ರೀಮತಿ ಪೂರ್ಣಿಮಾ ಸುಬ್ರಹ್ಮಣ್ಯ ಅವರ ಶ್ರಮ ತುಂಬಾ ಸಾರ್ಥಕವೆನಿಸಿತು.





ಮಕ್ಕಳಿಗೆಲ್ಲ ಮುದವೆನ್ನಿಸಿತು. ಹಳ್ಳಿಯ ವಾತಾವರಣವನ್ನು ಹಾಡಿಗೆ ತಕ್ಕಂತೆ ಸೃಷ್ಟಿಸಿದ್ದು ಮೆಚ್ಚುವಂತಿತ್ತು.

ಮಲ್ಲಿಗೆ ಕನ್ನಡ ಸಂಘದ ಸದಸ್ಯರುಗಳ ಪೋಷಕರನ್ನು ಸೇರಿಸಿಕೊಂಡು "ಭಾಗ್ಯದ ಬಳೆಗಾರ" ಎಂಬ ಜಾನಪದ ಗೀತೆಗೆ ನೃತ್ಯ ರೂಪಕ ನಿರೂಪಿಸಿದ ಶ್ರೀಮತಿ ವಿದ್ಯಾ ದತ್ತ ಮತ್ತು ಶ್ರೀಮತಿ ಮಂಜುಳಾ ಕೃಷ್ಣಪ್ಪ ಅವರ ಶ್ರಮ ಶ್ಲಾಘನೀಯ.



ಈ ಮಧ್ಯೆ ಗಾದೆ, ಒಗಟುಗಳನ್ನು ಪ್ರೇಕ್ಷಕರಿಗೆ ತಿಳಿಸಿ Door prizes ಕೊಟ್ಟಿದ್ದು ಶ್ರೀಮತಿ ನಿರುಪಮಾ ಶರ್ಮ ಮತ್ತು ನಾಗಶ್ರೀ ಶ್ರೀನಿವಾಸ್ .

"ಮೈಸೂರು ದಸರಾ ಎಷ್ಟೊಂದು ಸುಂದರ" ಎಂಬ ನೃತ್ಯ ನಾಟಕ ತುಂಬ ಸೊಗಸಾಗಿ ಕನ್ನಡದ ಜನಮನಗಳಲ್ಲಿ ಎಂದೂ ಅಚ್ಚಳಿಯದಂತೆ ಮೂಡಿಬಂತು. ಜಂಬೂ ಸವಾರಿ ಆನೆಗೆ ಅಲಂಕರಿಸಿದ ರೀತಿ, ಚಾಮುಂಡೇಶ್ವರಿ ಅಲಂಕಾರ, ಚಾಮುಂಡಿ ಮಹಿಷಾಸುರನನ್ನು ವಧಿಸಿದ ರೀತಿ, ಮಹಾರಾಜರು ಬಂದು ಉತ್ಸವವನ್ನು ವೀಕ್ಷಿಸಿದ ರೀತಿ, ಅರಮನೆಯಲ್ಲಿ ನಾಟ್ಯ ರಾಣಿಯರು ನೃತ್ಯಿಸಿದ ರೀತಿ, ಮಕ್ಕಳು ಹಾಕಿದ ಕೀಲುಕುದುರೆ, ಹುಲಿ ವೇಷಗಳು, ಎಲ್ಲವೂ ಮೈಸೂರಿನಲ್ಲಿ ದಸರಾ ಮಹೋತ್ಸವ ನಡೆಯುವ ರೀತಿಯಲ್ಲೇ ನಿರೂಪಿಸಿದ್ದು ಎಲ್ಲರಿಗೂ "ಆಹಾ" ಎನ್ನುವ ರೀತಿ ಆಯಿತು. ಇದಕ್ಕಾಗಿ ಪರಿಶ್ರಮಿಸಿದ ಶ್ರೀಮತಿ ವೀಣಾ ಅರವಿಂದ್, ಶ್ರೀಮಾನ್ ರವಿ ವಿಶ್ವನಾಥ್, ಶ್ರೀಮತಿ ಲತಾ ರವಿ, ಮತ್ತು ಅವರ ಗೆಳೆಯ ವೃಂದದವರಿಗೆಲ್ಲಾ ಅಭಿನಂದಿಸಲೇ ಬೇಕು.



ಅಮೆರಿಕಾದಲ್ಲಿ ಎಲ್ಲಾ ಕೆಲಸದ ನಡುವೆಯೂ ಮಕ್ಕಳನ್ನು ಅಭ್ಯಾಸಕ್ಕಾಗಿ ಕರೆದುಕೊಂಡು ಹೋಗುವುದು ಎಷ್ಟು ಕಷ್ಟದ ಕೆಲಸ ಎಂದು ತೋರಿಸಿ ಕೊಟ್ಟ "practice ಫಜೀತಿ" ಎಂಬ ನೃತ್ಯ ರೂಪಕವನ್ನು ನಡೆಸಿಕೊಟ್ಟವರು ಶ್ರೀಮತಿ ಸಂಧ್ಯಾ ಹೊನ್ನವಳ್ಳಿ ಮತ್ತು ಶ್ರೀಮತಿ ರೂಪ ಉಪಾಧ್ಯ. ಮನಸ್ಸಿದ್ದರೆ ಮಾರ್ಗ ಎಂದು ಭಾವಿಸಿ, ಚಿತ್ರಗೀತೆಗೆ ಸುಮನೋಹರವಾಗಿ ನರ್ತಿಸಿದ್ದು ನಮ್ಮ ಡ್ಯಾಲ್ಲಸ್ ನಗರದ ಹೆಣ್ಣು ಮಕ್ಕಳು.



"ಎಲ್ಲೋ ಜಿನುಗಿರುವ ನೀರು, ಎಲ್ಲೋ ಝರಿಯಾಗಿ ಹರಿದು" ಎಂಬ ಹಾಡಿಗೆ, ಬಣ್ಣ ಬಣ್ಣದ ಉಡುಪು ಧರಿಸಿ, ಹಾವ ಭಾವದಿಂದ ನರ್ತಿಸಿದ ಹೆಣ್ಣುಮಕ್ಕಳು ಎಲ್ಲರ ಮನ ಸೂರೆಗೊಂಡರು. ಈ ನೃತ್ಯವನ್ನು ನಿರೂಪಿಸಿದವರು ಶ್ರೀಮತಿ ಅನುಪಮ ಬೆನಕಟ್ಟಿ.

ಕರ್ನಾಟಕದಲ್ಲಿ ಕನ್ನಡವನ್ನು ಬೇರೆ ಬೇರೆ ಶೈಲಿಯಲ್ಲಿ ಮಾತಾಡುವ ಬಗೆಯ ಪರಿಚಯವನ್ನು "ಬಳುಕ್ತಾಳಮ್ಮ ನಮ್ ಕಾವೇರಿ" ಎಂಬ ನೃತ್ಯದ ಮಧ್ಯೆ ಮಧ್ಯೆ ತಿಳಿಸಿಕೊಟ್ಟಿದ್ದು ಸೊಗಸಾಗಿತ್ತು. ನೃತ್ಯ ತುಂಬಾ ಚೆನ್ನಾಗಿ ಮೂಡಿಬರಲು ಕಾರಣ ಕರ್ತರಾದ ಶ್ರೀಮತಿ ಪ್ರೀತಿ ರಾವ್ ಅವರ ಶ್ರಮ ಸಾರ್ಥಕವಾಯಿತು.

ಶ್ರೀಮತಿ ಚೈತ್ರ ಶ್ರೀಧರ್ ನಿರೂಪಿಸಿದ "ಮಲ್ನಾಡಿನ ಮೂಲೆನಾಗೆ" ಎಂಬ ಹಾಡಿನಲ್ಲಿ ಚೆಣ್ಣರು ನೀತಿ ಕತೆಯನ್ನು ನಿರೂಪಿಸಿದ್ದು





ಭೂಲೋಕದಲ್ಲಿ ಮನೆ ಕಟ್ಟಿ ಗೃಹಪ್ರವೇಶ ಮತ್ತು ಸತ್ಯನಾರಾಯಣ ಪೂಜೆಗೆ ಆಹ್ವಾನಿಸಲು ಸ್ವರ್ಗಲೋಕಕ್ಕೆ ಹೋದರು ನಮ್ಮ ಭೂಲೋಕದ ನಾರಿಮಣಿ ಮೈಥಿಲಿ. ಅಲ್ಲಿ ಸರಸ್ವತಿ, ಇಂದ್ರಾಣಿ, ಲಕ್ಷ್ಮಿ, ಮತ್ತು ಪಾರ್ವತಿ-ಇವರೆಲ್ಲರನ್ನು ಆಹ್ವಾನಿಸಲು shuttleನಲ್ಲಿ ಪ್ರಯಾಣ ಮಾಡಿದರು. ಅಲ್ಲಿ ಸರಸ್ವತಿ ಬ್ರಹ್ಮನನ್ನು, ಲಕ್ಷ್ಮಿ ನಾರಾಯಣನನ್ನು, ಇಂದ್ರಾಣಿ ಇಂದ್ರನನ್ನು, ಮತ್ತು ಪಾರ್ವತಿ ಶಿವನನ್ನು ತೆಗಳಿದ್ದೇ ತೆಗಳಿದ್ದು. ಭೂಲೋಕದಲ್ಲಾಗಲೀ, ಸ್ವರ್ಗಲೋಕದಲ್ಲಾಗಲೀ ಗಂಡಸರ ಕಿರಿಕಿರಿ ಸ್ವಭಾವ ಇದ್ದಿದ್ದೇ ಎಂದು ಮೈಥಿಲಿಗೆ ಮನವರಿಕೆಯಾಯಿತು. ಆದರೆ ಆಹ್ವಾನಕ್ಕೆ ಮನ್ನಣೆಯಿತ್ತು ಭೂಲೋಕಕ್ಕೆ ಬಂದ ದೇವಿಯರು ತಮ್ಮ ತಮ್ಮ ಗಂಡಂದಿರ ಬಗ್ಗೆ ಹೆಮ್ಮೆ ಇಂದ ಹೊಗಳಿಕೊಳ್ಳುವುದನ್ನು ನೋಡಿದ ಪ್ರೇಕ್ಷಕರಿಗೆ ದಂಗಾಯಿತು. ಹೆಂಗಸರಿಗಾಗಿ ಹೆಂಗಸರಿಂದ ಎಂಬ ನುಡಿಗಟ್ಟಿನ ಹಿನ್ನೆಲೆಯಲ್ಲಿ ತಯಾರಾದ ಈ ನಾಟಕದ ಬಗ್ಗೆ ಶ್ರೀಮತಿ ಮೀನಾ ಭಾರದ್ವಾಜ ಅವರು ಮನ ಮುಟ್ಟುವಂತೆ ವಿವರ ನೀಡುತ್ತಾ ಇದ್ದರು. ಪ್ರೇಕ್ಷಕರು ಈ ಎಲ್ಲ ಸಂಧರ್ಭಕ್ಕೆ ನಕ್ಕಿದ್ದೋ ನಕ್ಕಿದ್ದು. ಈ ನಾಟಕ ನೋಡಿ ಗಂಡಸರ ಮುಖಗಳೆಲ್ಲ ಹೇಗಾಗಿರಬೇಕು? ಕತ್ತಲೆಯಲ್ಲಿ ಯಾರಿಗೂ ಕಾಣಿ ಸಲಿಲ್ಲವಷ್ಟೇ! ಅಂತು ಸೊಗಸಾದ ರೂಪಕ ಮೂಡಿಬಂತು. ಈ ನಗೆ ನಾಟಕ ನಿರ್ದೇಶಿಸಿದ್ದು ಶ್ರೀಮತಿ ನಂದಿನಿ ಕಂಬಿ.

ಸಂಘದ ಹೆಂಗಳೆಯರು ತುಂಬಾ ಉತ್ಸಾಹದಿಂದ ಮಾಡಿದ “ಶಿವನು ಭಿಕ್ಷಕ್ಕೆ ಬಂದ, ನೀಡು ಬಾರೆ ತಂಗಿ” ಎಂಬ ನೃತ್ಯ ಚೆನ್ನಾಗಿತ್ತು. ಹಾಡು, ಅವರು ಧರಿಸಿದ ಒಂದೇ ತರಹದ ಉಡುಪುಗಳು, ನೃತ್ಯದಲ್ಲಿ ಅವರು ತೋರಿದ ವೈಯ್ಯಾರ ಎಲ್ಲರ ಮನ ಸೆಳೆಯುವಂತೆ ನಿರೂಪಿಸಿದವರು ಶ್ರೀಮತಿ ಅನುಪಮಾ ಬೆನಕಟ್ಟಿ.



ಸಂಘದ ಮಹನೀಯರು, ಮಹಿಳೆಯರಿಗಿಂತ ನಾವೇನು ಕಡಿಮೆ ಇಲ್ಲ ಎಂದು ನಡೆಸಿ ಕೊಟ್ಟ ಹಾಸ್ಯ ನಾಟಕ "ಗುರು ಶಿಷ್ಯರು" ತುಂಬಾ ಚೆನ್ನಾಗಿ ಮೂಡಿಬಂತು. ಶ್ರೀಮತಿ ಸಂಧ್ಯಾ ಹೊನ್ನವಳ್ಳಿ ಅವರ ಮಾರ್ಗದರ್ಶನದಲ್ಲಿ ಮೂಡಿಬಂದ ಈ ನಾಟಕ ಸಭಿಕರನ್ನು ನಗೆಗಡಲಲ್ಲಿ ಮುಳುಗಿಸಿತು.



ಶ್ರೀಮತಿ ಜಯಶ್ರಿ ಮೂರ್ತಿ ಅವರು ತಮ್ಮ ನಗುಮುಖದಿಂದ ಎಲ್ಲರಿಗೂ ವಂದನಾರ್ಪಣೆ ಮಾಡಿದರು. ತಮ್ಮ ಇಡೀ ಕಾರ್ಯಕಾರಿ ಸಮಿತಿಯ ಸದಸ್ಯರಿಗೂ, ಈ ಕಾರ್ಯಕ್ರಮದ ಎಲ್ಲಾ ಪ್ರಾಯೋಜಕರಿಗೂ ಧನ್ಯವಾದ ಸಲ್ಲಿಸಿದರು. 'ಕಂಪು' ಸಂಚಿಕೆಯ ಸಂಪಾದಕಿ ಶ್ರೀಮತಿ ಪೂರ್ಣಿಮಾ ಸುಬ್ರಹ್ಮಣ್ಯ ಅವರನ್ನು 'ಎಲೆ ಮರೆಯ ಕಾಯಿ' ಎಂದು ಸಂಭೋದಿಸಿ ಅವರಿಗೆ ಪ್ರೋತ್ಸಾಹಪೂರ್ವಕವಾಗಿ ಕಿರುಬಹುಮಾನವಿತ್ತು ಗೌರವಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಿರಿ, ಕಿರಿ ಕಲಾವಿದರಿಗೂ, ಪ್ರೇಕ್ಷಕರಿಗೂ, ವಂದನೆಗಳನ್ನು ಸಲ್ಲಿಸಿದರು. ನಂತರ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು. ಎಲ್ಲರು ಉಡುಪಿ ಕೆಫೇ ಅವರು ತಯಾರಿಸಿದ ರುಚಿಯಾದ ಭೋಜನ ಮಾಡಿ ಅವರವರ ಮನೆಗಳಿಗೆ ತೆರಳಿದರು.

ಅಮೇರಿಕಾದಲ್ಲಿರುವ ಕನ್ನಡದವರಿಗೆ, ಹಬ್ಬ ಹರಿದಿನಗಳನ್ನು ಮರೆಯದೆ ಆಚರಿಸುವ ಕನ್ನಡಿಗರಿಗೆ ಕನ್ನಡಾಂಬೆಯ ಆಶೀರ್ವಾದವಿರಲಿ.

ಕಾರ್ಯಕ್ರಮದ ಚಿತ್ರಸಂಪುಟಕ್ಕೆ ಇಲ್ಲಿ ಚಿಟುಕಿಸಿ.






**ಫೆಬ್ರವರಿ** ೩ರ ಸಂಜೆ  Plano Courtyard Theatre ನಲ್ಲಿ ಸಡಗರದ ವಾತಾವರಣ. ಕಾರಣ, ಅಂದು ನಮ್ಮ ನೆಚ್ಚಿನ MKANT ಏರ್ಪಡಿಸಿದ್ದ ಮಲ್ಲಿಗೆ ಕನ್ನಡಿಗರ ಪ್ರತಿಭಾ ಪ್ರದರ್ಶನ ದಿನ. ಸುಮಾರು ೫೦ಕ್ಕೂ ಹೆಚ್ಚಿನ ಉತ್ಸಾಹೀ ಪ್ರತಿಭೆಗಳು ತಮ್ಮ ಸಾಮರ್ಥ್ಯವನ್ನು ಪ್ರಸ್ತುತಪಡಿಸಿದರು.

ಆ ಸಂಜೆ - ಶಾಸ್ತ್ರೀಯ ಸಂಗೀತ, ಭಾವ ಗೀತೆ, ಚಿತ್ರಗೀತೆ, ಪಾಶ್ಚಾತ್ಯ ಸಂಗೀತ, ವಾದ್ಯ ಸಂಗೀತ, ಆರ್ಕೆಸ್ಟ್ರಾ, ಭರತನಾಟ್ಯ, ಸಿನೆಮಾ ನೃತ್ಯ, ಕರಾಟೆ, ಕಥೆ ಹೇಳುವುದು, ಏಕಪಾತ್ರಾಭಿನಯ, ಮಿಮಿಕ್ರಿ ಮೊದಲಾದ ಒಂದೇ ಎರಡೇ ...ವಿವಿಧ ವಿನೋದಾವಳಿಗಳ ಸರಮಾಲೆ.

ಹಲವಾರು ಮಕ್ಕಳು ತಮ್ಮ ಸಾಕಷ್ಟು ತಯಾರಿ ಮಾಡಿ ಬಂದು ಮನರಂಜಿಸಿದರು. ಹಾಡುಗಾರಿಕೆಯಲ್ಲಿ ಸ್ಪಷ್ಟತೆ, ನೃತ್ಯದಲ್ಲಿನ ಭಾವಾಭಿನಯ, ಸಿನೆಮಾ ನೃತ್ಯಗಳ ಚಮಕ್, ಕಥೆ ಕಟ್ಟುವ ಚತುರತೆ, ಒಳ್ಳೆ ವೇಷಭೂಷಣ ಮತ್ತು ಮಾತುಗಾರಿಕೆಯ ಏಕಪಾತ್ರಾಭಿನಯ, ವಾದ್ಯದೊಂದಿಗೆ ಸುಶ್ರಾವ್ಯವಾಗಿ ಮೂಡಿ ಬಂದ ಪಾಶಾತ್ಯ ಸಂಗೀತ ಮೊದಲಾದ ಎಲ್ಲವೂ ಸಭಿಕರಿಗೆ ರಸದೌತಣ ನೀಡಿದವು.



ಮಕ್ಕಳ ಕಾರ್ಯಕ್ರಮಗಳು ಮುದ ನೀಡಿದರೆ, ಹಿರಿಯರ ಕಾರ್ಯಕ್ರಮಗಳದ್ದು ಮತ್ತೊಂದು ಬಗೆಯ ಮೆರುಗು. ಹಲವಾರು ಹಿರಿಯರು ಉತ್ಸಾಹದಿಂದ ಪಾಲ್ಗೊಂಡು ಹಾಡುಗಾರಿಕೆ, ನೃತ್ಯ, ಆರ್ಕೆಸ್ಟ್ರಾ ಮೊದಲಾದ ತಮ್ಮ ಪ್ರತಿಭೆ ಪ್ರದರ್ಶಿಸಿದರು. ಒಂದೇ ಕುಟುಂಬದ ಸದಸ್ಯರು ಸೇರಿ ನಡೆಸಿದ ಆರ್ಕೆಸ್ಟ್ರಾ ಬಹಳ ಚೆನ್ನಾಗಿತ್ತು.



ಒಟ್ಟಿನಲ್ಲಿ ಹೇಳುವುದಾದರೆ, MKANT ತನ್ನ ಸದಸ್ಯರಿಗೆ ತಮ್ಮ ವೈಯುಕ್ತಿಕ ಪ್ರತಿಭೆ ಪ್ರದಶಿಸಲು ಒಳ್ಳೆ ಅವಕಾಶ ಕಲ್ಪಿಸಿತ್ತು. ಒಂದೇ ಒಂದು ಕೊರತೆ ಎಂದರೆ ಪ್ರೇಕ್ಷಕರ  ಸಂಖ್ಯೆ. ಅಂದು ನಡೆಯುತ್ತಿದ್ದ Super Bowl ಪ್ರಭಾವವೋ ಏನೋ ಕೊನೆ ಕೊನೆಗಂತೂ ತೀರ ಬೆರಳೆಣಿಕೆ ಜನರಿದ್ದರು. ಮುಂದಿನ ದಿನಗಳಲ್ಲಿ ಎಲ್ಲ ಕೊರತೆಯನ್ನು ಮೀರಿ ಬೆಳೆಯುವ ಆಶಯ ಸಂಘದ್ದು.







ಕಾರ್ಯಕ್ರಮದ ಚಿತ್ರಸಂಪುಟಕ್ಕೆ ಇಲ್ಲಿ ಚಿಟುಕಿಸಿ.

## ಅಧ್ಯಕ್ಷರ ಸಂದೇಶ

- ಜಯಶ್ರೀ ಮೂರ್ತಿ



**ಪ್ರೀತಿಯ** ಕನ್ನಡ ಬಾಂಧವರೆ,

ಮಲ್ಲಿಗೆ ಕನ್ನಡ ಸಂಘದ (MKANT) ಪರವಾಗಿ ವಿಜಯನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳು. ಈ ಹೊಸ ವರ್ಷವು ಅನ್ವರ್ಥಕವಾಗಿ ಮೂಡಿ ಬಂದು, ನಿಮ್ಮ ಜೀವನದ ಎಲ್ಲಾ ಆಯಾಮಗಳಲ್ಲೂ "ವಿಜಯ"ವನ್ನು ತರಲೆಂದು ಆಶಿಸುತ್ತೇನೆ.

ನಮ್ಮೆಲ್ಲರ ಸಂಘದ "ಯುಗಾದಿ ಕಾರ್ಯಕ್ರಮ"ವನ್ನು ವಿಜೃಂಭಣೆಯಿಂದ ಆಚರಿಸಲು ಹಲವಾರು ತಯಾರಿಗಳು ಭರದಿಂದ ನಡೆದಿವೆ. ನಿಸರ್ಗದಲ್ಲಿ ವಸಂತ ತಲೆದೋರುವ ಈ ಸಂದರ್ಭದಲ್ಲಿ ಉತ್ತರ ಟೆಕ್ಸಾಸಿನ "ಮಲ್ಲಿಗೆ"ಯೂ ಅರಳಿ ನಿಂತು ಸ್ವಾಗತವನ್ನು ಕೋರುತ್ತಿದೆ ಎನ್ನಬಹುದು. ಏಪ್ರಿಲ್ 14 ರಂದು Lewisville Grand Theater ನಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಬಂದು ಸಕ್ರಿಯವಾಗಿ ಭಾಗವಹಿಸುತ್ತೀರೆಂದು ನಂಬಿದ್ದೇನೆ.

"ಬೇವು-ಬೆಲ್ಲ" ತಿಂದು ಮುಂಬರುವ ವರ್ಷದ ಎಲ್ಲ ಸುಖ-ದುಃಖಗಳನ್ನು ಸಮಚಿತ್ತರಾಗಿ ಅನುಭವಿಸಲೋಸುಗ ಭಗವಂತನಲ್ಲಿ ಆತ್ಮಧೃತಿಯನ್ನು ಬೇಡುವ ಸಂದರ್ಭ ಈ ಯುಗಾದಿ. ಬೇವಿನಿಂದ ಬೆಲ್ಲದ ರುಚಿ ಇನ್ನೂ ಹೆಚ್ಚು. ಕಷ್ಟದಲ್ಲಿ ಬೆಂದ ಮನಕ್ಕೆ ಸುಖದ ತಂಪು ಅತ್ಯಮೂಲ್ಯ. ವಿರಹದ ಬೇಗೆ ಎಷ್ಟು ತೀವ್ರವೋ ಮಿಲನದ ಉತ್ಕರ್ಷವೂ ಅಷ್ಟೇ ತೀಕ್ಷ್ಣ. ಈ ಜಾಡಿನಲ್ಲಿ ಯೋಚಿಸಿದಾಗ ನಾವು ತಾಯ್ನಾಡಿನಿಂದ ಇಷ್ಟು ದೂರ ಬಂದು ನೆಲೆಸಿ, ಭಿನ್ನ ಸಂಸ್ಕೃತಿಯವರೆಂದು ದಿನವೂ ಅನ್ನಿಸುವ ಒಗಚು ಭಾವನೆಗೆ ಒಗ್ಗಿ ಹೋಗಿರುವ ನಮಗೆ, ಕನ್ನಡದ ಮಾತು, ಸಂಸ್ಕೃತಿ, ಕನ್ನಡಿಗರ ಒಡನಾಟ ಇವೆಲ್ಲವೂ ಬಹಳ ಅಪ್ಯಾಯಮಾನವಾಗಿ ಕಾಣುವುದು ಸಹಜವೇ. ಈ ನಿಟ್ಟಿನಲ್ಲಿ ಮಲ್ಲಿಗೆ ಕನ್ನಡ ಸಂಘವು ತಮ್ಮ ಆಶಯಗಳಿಗೆ ರೆಕ್ಕೆ ಇಕ್ಕಿ, ತಮ್ಮ ಕನಸುಗಳಿಗೆ ಜೀವ ತುಂಬಿ, ತಮ್ಮ ಕಾಯಕದ ಜೀವನಕ್ಕೆ ಚೈತನ್ಯದ ಹುರುಪಾಗಿದೆಯೆಂದು ನಂಬಿದ್ದೇನೆ.
ಬನ್ನಿ, ನಾವೆಲ್ಲರೂ ಕೂಡಿ ಕನ್ನಡಾಂಬೆಯ ಹಿರಿಮೆಯ ಬೆಲ್ಲದ ಸವಿಯನ್ನು ಮೆಲ್ಲುತ್ತಾ ಹರ್ಷದಿಂದ "ವಿಜಯ"ನನ್ನು ಸ್ವಾಗತಿಸೋಣ!!

ಇಂತಿ ನಿಮ್ಮ ಶುಭಾಕಾಂಕ್ಷಿ
ಜಯಶ್ರೀ ಮೂರ್ತಿ

## ಸಂಪಾದಕೀಯ

- ಪೂರ್ಣಿಮ ಸುಬ್ರಹ್ಮಣ್ಯ



ನಮಸ್ಕಾರ ,
ಕಂಪು ವಾಚಕ ವೃಂದಕ್ಕೆ "ವಿಜಯ" ನಾಮ ಸಂವತ್ಸರ ಯುಗಾದಿ ಹಬ್ಬದ ಶುಭಾಶಯಗಳು. ಯುಗಾದಿ ಕೇವಲ ಬೇವು-ಬೆಲ್ಲ, ಹಬ್ಬದಡಿಗೆಗೆ ಸೀಮಿತವಲ್ಲ, ಅದು ನಿರಾಶೆಯ ಜಡತ್ವ ಕರಗಿಸುವ ಭರವಸೆಯ ಚೇತನ. ಈ ಸಮಯದಲ್ಲಿ ಪ್ರಕೃತಿ ಹೊಸಹುಟ್ಟು ಪಡೆದರೆ, ನಾವು ಹೊಸ ಕನಸು ನೇಯುತ್ತೇವೆ.ನೀವು ನೇಯ್ದ ಕನಸುಗಳು ಸಾಕಾರವಾಗಲಿ ಎನ್ನುವ ಹಾರೈಕೆ ನನ್ನದು.

ಸಂಭ್ರಮದ ಮತ್ತೊಂದು ಹೆಸರೇ ವಸಂತ. "ವಸಂತ ಬರಲು ಮರ ಚಿಗುರುವುದು" ಎನ್ನುತ್ತದೆ ಕವಿವಾಣಿ. ಇದು ನಮ್ಮ ಕಂಪು ಬಳಗಕ್ಕೂ ಹೊಸ ಹೊಸ ಆಸಕ್ತಿ ಚಿಗುರೊಡೆವ ಕ್ಷಣ. ಸೃಜನಶೀಲ ಮನಸ್ಸು ಯಾವುದೋ ಇಂಪಿಗೆ, ಸೊಂಪಿಗೆ, ನೋವು-ನಲಿವಿಗೆ ಸ್ಪಂದಿಸುವ ಸಮಯ. ನಿಮ್ಮ ಭಾವಸ್ಫುರಣಕ್ಕೆ ಒಂದು ವೇದಿಕೆ ಈ ಕಂಪು. ನಮ್ಮ ಕರೆಗೆ ಓಗೊಟ್ಟು ಹಲವಾರು ಉತ್ಸಾಹೀ ಮನಸ್ಸುಗಳು ತಮ್ಮ ಲೇಖನ-ಚಿತ್ರಗಳನ್ನು ನಮಗೆ ಕಳಿಸಿದ್ದಾರೆ, ಈ ಸೃಜನಶೀಲರ ಸಂತತಿ ಸಾವಿರವಾಗಲಿ.

ಈ ಸಂವತ್ಸರ ತನ್ನ ಹೆಸರಿಗೆ ತಕ್ಕಂತೆ, ಎಲ್ಲರ ಗುರಿಸಾಧನೆಗೆ ಅನುಕೂಲಕರವಾಗಿರಲಿ ಎಂದು ಹಾರೈಸುತ್ತಾ
ಪೂರ್ಣಿಮ ಸುಬ್ರಹ್ಮಣ್ಯ.

# ವಿಜಯನ ದಾಪುಗಾಲು

- ಸುಧಾ ಶ್ರೀನಾಥ್



**“April** rains bring May flowers! ಅಂದ್ಕೊಂಡು ಖುಷಿ ಪಡ್ಬೇಕು. ಇಲ್ಲಾಂದ್ರೆ ಈ ತಿಂಗಳಪೂರ್ತಿ ಮಳೆ, ಕೊಚ್ಚೆ ತಪ್ಪಿದ್ದಲ್ಲ, ಅಲ್ವಾ?”

“ಹೌದು, ಮತ್ತೆ ಸಂಜೆ ಯುಗಾದಿಯ ಮಕ್ಕಳ ಕಾರ್ಯಕ್ರಮದ ರಿಹರ್ಸಲ್‌ಗೂ ಹೋಗ್ಬೇಕು ಈ ಮಳೆಯಲ್ಲೇ. ಮಳೆಯಲ್ಲಿ ಡ್ರೈವ್ಮಾಡೋದು ನಂಗೆ ಕಷ್ಟ ಅನಿಸುತ್ತೆ. MKANTನ ಯುಗಾದಿ ಕಾರ್ಯಕ್ರಮಕ್ಕೆ ಮಕ್ಕಳು ‘ಮಳೆರಾಯ, ಮಳೆರಾಯ’ dance ಕಲಿತಿದ್ದಾರೆ.” ಮಾತಾಡುತ್ತಾ ‘ಅರಳು ಮಲ್ಲಿಗೆ’ ಕ್ಲಾಸ್‌ನೊಳಗೆಬಂದರು ಕೆಲವು ಪೋಷಕರು ಮಕ್ಕಳೊಡನೆ.

ಜೊತೆಯಲ್ಲೇ ಒಳಗೆ ಬಂದವರು ಹೊಸ ರೇಶ್ಮೆ ಸೀರೆಯುಟ್ಟು, ಚೆಂದದ ತುರುಬಿಗೆ ಮಲ್ಲಿಗೆಯ ದಂಡೆ ಮುಡಿದು, ಮದುಮಗಳಿನಂತೆ ಕಂಗೊಳಿಸುತ್ತಿದ್ದ ಕಲ್ಪನಾರವರು. “ಇವತ್ತು ನಮ್ಮ ಮದುವೆಯ ದಿನ.ಇಂದಿಗೆ ನಮ್ಮ ಮದುವೆಯಾಗಿ ಕಾಲು ಶತಮಾನ ಆಯ್ತು. ಅದಕ್ಕೇ ಯಜ್ಞಶಾಲೆಯಲ್ಲಿ ವಿಶೇಷವಾಗಿ ಶ್ರೀನಿವಾಸ ಕಲ್ಯಾಣ ಕಾರ್ಯಕ್ರಮ ಇಟ್ಟುಕೊಂಡಿದ್ದೀವಿ. ನೀವುಗಳೆಲ್ಲಾ ಪಾಠ ಮುಗಿದ ಮೇಲೆ ಅಲ್ಲಿಗೆ ಬಂದುಪ್ರಸಾದ ಮತ್ತು ಮದುವೆಯ ಔತಣ ಸ್ವೀಕರಿಸಬೇಕು.” ಅಚ್ಚಕನ್ನಡದಲ್ಲಿ ಎಲ್ಲರಿಗೂ ಆತ್ಮೀಯ ಆಹ್ವಾನವಿತ್ತರು.

“ಓಹೋ, ಅದೋ ಸಮಾಚಾರ. No wonder, you are looking like a beautiful bride today. Many happy returns of this special day! ನಿಮಗೆ ಶುಭವಾಗಲಿ” ಟೀಚರ್ ಮತ್ತು ಪೋಷಕರು ಅವರಿಗೆ ಶುಭಾಶಯಗಳನ್ನು ತಿಳಿಸಿದರು. ಎಲ್ಲರ ಮುಖದಲ್ಲೂ ಸಂತಸದಹೂನಗೆ.

“ಆಂಟೀ, ಕಾಲು ಶತಮಾನ ಅಂದ್ರೆ ಏನು?” ಪುಟ್ಟನೊಬ್ಬನ ಪ್ರಶ್ನೆ.

“ಶತಮಾನ ಅಂದ್ರೆ ನೂರು ವರ್ಷ. ಅದರ ಕಾಲು ಭಾಗ ಅಂದ್ರೆ ೨೫ವರ್ಷ. Today is the 25th anniversary of their marriage. So, they are celebrating it with special prayers.” ಟೀಚರ್ಕೊಟ್ಟ ವಿವರಣೆಯಿಂದ ಅವನಿಗೆ ಸಮಾಧಾನವಾದಂತೆ ಕಾಣಲಿಲ್ಲ.

“ಕಾಲು means leg ಅಲ್ವಾ?”

“ಹೌದು. ಹಾಗೆಯೇ ಕಾಲು ಅಂದ್ರೆ ನಾಲ್ಕನೆಯ ಒಂದು ಭಾಗ (one fourth) ಅಂತಲೂ ಅರ್ಥ ಇದೆ. ಇಲ್ಲಿ ಬಳಸಿರುವುದು ಆ ಅರ್ಥದಲ್ಲಿ.”

‘ಕಾಲು’ ಪದ ಅಂದಿನ ಹರಟೆಗೆ ತಾನಾಗಿಯೇ ಕಾಲಿಟ್ಟು ಎಲ್ಲರ ಒಪ್ಪಿಗೆಪಡೆದಂತಾಯಿತು. ನಮ್ಮ ‘ಅರಳು ಮಲ್ಲಿಗೆ’ ಶಾಲೆಯ ಹರಟೆಯಲ್ಲಿ ಎಲ್ಲಾ ಪೋಷಕರೂ ಮಕ್ಕಳ ಜೊತೆ ಪಾಲ್ಗೊಳ್ಳುವವರೇ. ಎಲ್ಲರೂ ತಮ್ಮ ತಮ್ಮಅನುಭವ ಮತ್ತು ಆಲೋಚನೆಗಳನ್ನು ಪರಸ್ಪರ ಹಂಚಿಕೊಳ್ಳುವುದಕ್ಕೆಇದೊಂದು ವೇದಿಕೆ. ಮಕ್ಕಳ ಕನ್ನಡ ಕಲಿಕೆಯಲ್ಲಿ ತಾವೂ ನೆರವಾಗಬೇಕೆನ್ನುವುದು ಎಲ್ಲರ ಅನಿಸಿಕೆ.

“For socks ನಮ್ಮಜ್ಜಿ ಕಾಲುಚೀಲ ಅಂತಾರೆ. First time ಕೇಳಿದಾಗ ತುಂಬಾ ನಗು ಬಂತು. ಈಗ ಅಭ್ಯಾಸವಾಯ್ತು.” ಅವನ ಕಣ್ಣಲ್ಲಿನ್ನೂ ನಗುವಿತ್ತು.

“ಹೌದು, ‘ಕಾಲು’ ಅಂದ್ರೆ ಪಾದ ಅಂತಲೂ ಅರ್ಥವಿದೆ. Depending on the context, one chooses its meaning.”

“ಮಳೇಲಿ ನೆನೀಬೇಕು ಅಂತ ಬರಿಗಾಲಲ್ಲಿ ಹೋಗಿ ಕಾಲೆಲ್ಲ ಕೊಚ್ಚೆ ಮಾಡ್ಕೊಂಡು ಬಂದ. ಅದನ್ನು ತೊಳ್ಕೊಂಡು ಬರೋದು ತಡವಾಯ್ತು,ಕ್ಷಮಿಸಿ.” ವಿಜಯ್‌ನ ತಾಯಿ ತಡವಾಗಿದ್ದಕ್ಕೆ ಕ್ಷಮೆ ಕೋರಿ ಒಳಗೆ ಕಾಲಿಟ್ಟರು ವಿಜಯ್‌ನೊಡನೆ.

“ಹೌದಲ್ವಾ? ಆ ವಯಸ್ಸಿನಲ್ಲಿ ನಾವೂ ಮಳೇಲಿ ನೆನೆದು ಆಟ ಆಡ್ತಾ ಇದ್ದೆವಲ್ವಾ? ಈಗ ಮಳೆ ಬಂದರೆ ಕೊಚ್ಚೆ, ಕೆಸರು ಅಂತಾ ಆಕ್ಷೇಪಣೆ ಎತ್ತುತ್ತೀವಿ. ಸಿಮೆಂಟಿನ ಕಾಲುದಾರೀಲಿ ಮಾತ್ರ ನಡೀತೀವಿ. By the way, ಇಲ್ಲಿ ಕಾಲುದಾರಿ ಅಂದ್ರೆ footpath/sidewalk.”

“ಒಂದು ಗಾದೆ ನೆನಪಿಗೆ ಬಂತು ‘ಕೆಸರಲ್ಲಿ ಕಾಲಿಟ್ಟರೆ ಕೆಸರೇ ತಾನೇಆಗೋದು’ ಅಂತಾ. ನಾವು ಕೆಟ್ಟವರ ಜೊತೇಲಿದ್ರೆ ಕೆಟ್ಟ ಅಭ್ಯಾಸಗಳೇ ನಮಗೂ ಬರೋದು ಎನ್ನುವ ಅರ್ಥದಲ್ಲಿ ಇದನ್ನು ಬಳಸುತ್ತಾರೆ. “

“ಇನ್ನೊಂದು ಗಾದೆ ‘ಕಾಲಿಗೆ ಬಿದ್ದು ಕೋಳ ಹಾಕಿಸಿಕೊಂಡ ಹಾಗೆ’ ಅಂತ.Begging to get handcuffed is its literal translation. 'Inviting trouble' is an equivalent phrase in English.”

“ಈಗ ಬರುತ್ತಿರುವ ಹೊಸ ವರ್ಷದ ಹೆಸರು ವಿಜಯ. ಈ ವಿಜಯನಾಮ ಸಂವತ್ಸರದಲ್ಲಿ ನಿಮ್ಮೆಲ್ಲ ಕಾರ್ಯಗಳಲ್ಲೂ ವಿಜಯದ ಸಂತಸ ನಿಮ್ಮದಾಗಲಿ. May you all put your best foot forward.”ಪುಟ್ಟ ವಿಜಯನಿಗೆ ಹೊಸ ವರ್ಷಕ್ಕೆ ತನ್ನ ಹೆಸರೇ ಎಂದು ಖುಷಿಯೋ ಖುಷಿ.

"ಹೊಸ ಮನೆಗೆ ಕಾಲಿಡಬೇಕಾದ್ರೆ ಒಳ್ಳೆಯದಾಗಲಿ ಅಂತಾ ಮೊದಲುಬಲಗಾಲು ಒಳಗಿಟ್ಟು ಹೋಗ್ತಾರಲ್ವಾ? ಅದೇ best foot ಅಂತಲೋ ಅಥವಾ ಬಲಗಾಲು ಅಂದ್ರೆ ಬಲವಾದ ಕಾಲು ಅಂತಲೋ ಇರಬಹುದೇನೋ."

"ಸೊಸೆಯನ್ನು ಮನೆತುಂಬಿಸಿಕೊಳ್ಬೇಕಾದ್ರೆ ಹಾಗೂ ತವರಲ್ಲಿ ಬಾಣಂತನ ಮುಗಿದು ಮಗುವಿನ ಜೊತೆ ಬಂದಾಗಲೂ ಆರತಿ ಮಾಡಿ ಬಲಗಾಲೇ ಮೊದಲು ಒಳಗಿಟ್ಟು ಬರೋದು." ಮಕ್ಕಳಿಗೆ ಈ ಸಂದರ್ಭಗಳನ್ನು ವಿವರಿಸಿ ಹೇಳಿದರು ಟೀಚರ್.

“Right is right” ಪುಟಾಣಿಯೊಬ್ಬಳ ಸಂದರ್ಭೋಚಿತ pun ಎಲ್ಲರ ಮೆಚ್ಚಿಗೆ ಪಡೆಯಿತು.
“ಹೊಸವರ್ಷದಲ್ಲಿ ಕಾಲಿಡುವ ಈ ಶುಭಸಂದರ್ಭದಲ್ಲಿ ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು. Happy New Year to you all!”ಟೀಚರ್ ಕ್ಲಾಸ್ ಮುಗಿಸುವ ಸಮಯವಾಗಿದ್ದರಿಂದ ಮತ್ತೊಮ್ಮೆ ಎಲ್ಲರಿಗೂ ಶುಭಾಶಯ ಕೋರಿದರು.

“ನಾವು ಹೊಸ ವರ್ಷದಲ್ಲಿ ಕಾಲಿಡ್ತಾ ಇದೀವಾ? ಹೊಸ ವರ್ಷ ನಮ್ಮಜೀವನದಲ್ಲಿ ಕಾಲಿಡ್ತಾ ಇದೆಯಾ?” ಟೀಚರ್‌ನ ಕೀಟಲೆ ಮಾಡಿದರು ಪೋಷಕರೊಬ್ಬರು. “ನಿಮ್ಮ ಕಾಲೆಳೆಯುವುದಕ್ಕೆ ಪ್ರಯತ್ನ ಮಾಡಿದೆ,ಅಷ್ಟೇ.” ತಕ್ಷಣ ಹೇಳಿದರು.
“ಕಾಲೆಳೆಯುವುದು is the same thing as pulling someone's legs.” ವಿವರಣೆ ಕೇಳಿ ಎಲ್ಲರಿಗೂ ನಗು.

“I told my mom that I have got some seeds for seedless grapes. She asked me to plant them in our backyard.” ನಂದನ್ ತುಂಟನಗೆಯಿಂದ ಮುಂದುವರಿಸಿದ.
“ನಾನುಬೀಜವನ್ನು ಹಾಕುವಂತೆ ನಟಿಸುತ್ತಾ ‘ಅಮ್ಮಾ! ನನ್ನ ಕಾಲಮೇಲೆನಾಗರಹಾವು ಹೋಯ್ತು’ ಅಂತಾ ಕೂಗಿಕೊಂಡೆ. ಅಮ್ಮ ಅದನ್ನು ನಂಬಿಗಾಬರಿಯಿಂದ ಓಡಿ ಬಂದಮೇಲೇ ಗೊತ್ತಾಗಿದ್ದು ‘ಏಪ್ರಿಲ್ ಫೂಲ್’ಅಂತಾ. While 'seeds for seedless' was my way of fooling, the other part was dad's plan because there are no cobras in USA.”

ಇನ್ನೂ ಮಳೆ ಸಣ್ಣಗೆ ಬರುತ್ತಿತ್ತು. ಎಲ್ಲರೂ ಮದುವೆಯ ಔತಣಕ್ಕೆಂದುಯಜ್ಞಶಾಲೆಯ ಕಡೆಗೆ ಕಾಲುಹಾಕತೊಡಗಿದರು. ದಾಪುಗಾಲು ಹಾಕುತ್ತಾ ಎಲ್ಲರಿಗಿಂತಾ ಮುಂಚೆ ಅಲ್ಲಿಗೆ ಸೇರಿದ ವಿಜಯನ ಮುಗ್ಧವಿಜಯದ ನಗು ಎಲ್ಲರನ್ನೂ ಸ್ವಾಗತಿಸಿತು.

## ನಗೆಹೊನಲು

- ಜಯಶ್ರೀ ಮೂರ್ತಿ



ನಮಸ್ಕಾರ,


"ಕಂಪು"ವಿಗೆ ಏನಾದರೂ "ಹಾಸ್ಯಪ್ರಧಾನ"ವಾದದ್ದನ್ನು ಬರೆದು ಕಳಿಸಿ ಎಂಬ ಸಂದೇಶ, ಎಲ್ಲರಿಗೆ ಬಂದಂತೆ ನನಗೂ ಬಂದಾಗ, ನನ್ನ ಮನಸ್ಸಿನಲ್ಲಿ ಯಾವ "ಐಡಿಯಾ"ಗಳೂ ಇರಲಿಲ್ಲ. ನಂತರ, ಏಪ್ರಿಲ್ ತಿಂಗಳ ಪ್ರಭಾವವೋ, ಹಿಂದೆ ಯುಗಾದಿಯ ಸಂದರ್ಭದಲ್ಲಿ ಟಿ.ವಿ. ಯಲ್ಲಿ ನೋಡುತಿದ್ದ "ಹಾಸ್ಯ" ಕವಿ ಸಮ್ಮೇಳನದ ನೆನಪೋ, ಅಥವಾ ನಮ್ಮ ಸಂಪಾದಕಿಯ "ಜಾಸ್ತಿ ಯಾವ ಲೇಖನಗಳೂ ಬಂದಿಲ್ಲವೆಂಬ" ಕಾಳಜಿಗೋ, ನನ್ನ ಮನಸ್ಸು ಸ್ಪಂದಿಸಿ, ಕಂಡಿದ್ದ, ಕೇಳಿದ್ದ ಒಂದೆರಡು ಹಾಸ್ಯ ಪ್ರಕರಣಗಳನ್ನು ಮೆಲುಕು ಹಾಕಿದೆ. ಅದನ್ನು ಅಳವಡಿಸಿಕೊಂಡು ಒಂದು ಚಿಕ್ಕ "ವಿಡಿಯೋ" ತಯಾರಿಸಿದ್ದೇನೆ. ಇದನ್ನು ನೋಡುವ ದುಸ್ಸಾಹಸವನ್ನು ನೀವು ಮಾಡುವಿರೆಂದು ನಂಬಿದ್ದೇನೆ. ಈ ಕೆಳಗಿನ "ಲಿಂಕ್" ಮೇಲೆ ಚಿಟುಕಿಸಿ .


ನಗೆಹೊನಲು



## ಕನ್ನಡ ಕಂದನ ಕೈಬರಹ


- Archith Sharma





## Spring !!!

- Nidhi Kashyap



Spring

[tune of mary had a little lamb]



Spring is so... colorful,
beautiful, colorful.
Spring is so... beautiful
so, come and enjoy it!!



In the spring, the flowers sprout,
flowers sprout, flowers sprout.
In the spring the flowers sprout
with the beautiful colors!!



Everywhere you look and see,
look and see, look and see.
Everywhere you look and see
bunnies are hopping.



It's the time for easter eggs,
easter eggs, easter eggs.
It's the time for easter eggs
with good treats inside.



Butterflies are flying here,
flying there, flying here.
Butterflies are flying here
with pretty flattering wings!!!

Spring!!!

## My First Tooth

I screamed with glee as I charged into the house. It was my favorite day of the year, my birthday! I ran wildly around the house with a wide grin on my face. "Today was going to be the best day ever" – I thought to myself.

I didn't think the day could get any better until 8:00 pm when a miracle happened. I was on my last nibble of my birthday cake when the absolute scrumptiousness had something weird about it. I sprinted to the bathroom to get a closer look at my tooth. What I saw made me scream just like I did when I ran into the house but this time it could have broken my eardrums. If I wasn't so pale, my face was as white as sheep's coat. "How could this happen?" I thought, "I only bit a piece of cake". My tooth which had been wiggling for what seemed to like a century was missing from my mouth! I searched everywhere for my tooth, under my bed, in the bathroom wash basin, in the bowl in which I ate the cake, in the left over cake and even in my own mouth, but I could not find my tooth. There was a single small gap between 2 of my teeth. This was just unreal but I had no time to think about now because I had to find my tooth! Then I got the horrible feeling that "I SWALLOWED MY TOOTH". The very first tooth and I swallowed it. Now how would I get money from the tooth fairy, when the tooth is inside me? The answer came to me at a million miles per sec! I could just take a picture of my missing tooth and give her a picture! "Now that is an idea! Why didn't I think of it earlier" I thought aloud as I grabbed my camera and took a picture of me. I printed this out carefully and circled the missing tooth in my mouth in the picture. "Dear tooth fairy, I lost this tooth tonight" pointing to the missing tooth.

That night I placed the picture under my pillow and hoped that the tooth fairy would find it. I tried to stay awake but as I turned around and fell asleep almost immediately. I did not know that in a few hours I would find $20 under my bed. Hey, its not everyday you lose and eat your first tooth!



Pranav Kaginle


## The Crazy Day

I got stuck in a tree
When I heard I won the lottery
I got pricked by a rose
And washed it out with a hose!

That afternoon
I got a balloon
We went to a pizza place
Where I got accidently tazed!

The very night
I flew my kite
I got struck by a lightening
And it was very frightening!!

## Kid's Corner





Stuthi Sunil

Nikhil Raghu











Manasi Raghu

ಪ್ರೀತಿಯ ಜಯಶ್ರೀ ಮೂರ್ತಿ, ಹಾಗೂ ಅಲ್ಲಿನ ಇತರ ಕನ್ನಡ ಬಂಧುಗಳಿಗೆ ಪ್ರಪ್ರಥಮವಾಗಿ ಅಭಿನಂದನೆಗಳನ್ನು ತಿಳಿಸಲು ಸಂತೋಷವಾಗುತ್ತದೆ. ತಾವು ಅಭಿಮಾನಪೂರ್ವಕವಾಗಿ ಶ್ರಮ ವಹಿಸಿ ಅಂಚೆಮೂಲಕ ಕಳುಹಿಸಿಕೊಟ್ಟ 'ಮಲ್ಲಿಗೆ ಹೂವಿನ ಮಾಲೆ" ಕೈ ಸೇರಿತು. ಅದರ 'ಕಂಪನ್ನು, ಪರಿಮಳವನ್ನು ಆಘ್ರಾಣಿಸಿ ಆಹ್ಲಾದಗೊಂಡಿತು ನನ್ನ ಮನಸ್ಸು! ಮುಖಪತ್ರದಲ್ಲಿ ಮೂಡಿ ಬಂದಿರುವ "ಮೈಸೂರಿನ ಪೇಟ"ದ ಚಿತ್ರ (ನನ್ನ ಹುಟ್ಟೂರು, ಸಾಂಸ್ಕೃತಿಕ ನಗರ. ಮೈಸೂರು) ನನ್ನನ್ನು ಗತಕಾಲದ ನೆನಪಿನಂಗಳಕ್ಕೆ ಕರೆದೊಯ್ಯಿತು!

'ಗೋಪಾಲಕೃಷ್ಣ ಅಡಿಗ'ರವರ "ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು"... ಎಂಬ ಭಾವಗೀತೆ ಕೇಳಿದಾಗಲೆಲ್ಲಾ ನನ್ನ ಕಣ್ಣುಗಳು ತುಂಬಿ ಬರುತ್ತವೆ. ನಮ್ಮ ಮನೆ-ಮನಕ್ಕೆ ಮುದ ನೀಡಿದ್ದೇ ಅಲ್ಲದೆ ನಮ್ಮ ಜೀವನಕ್ಕೆ ಸಾರ್ಥಕತೆಯ ಭಾವ ನೀಡಿದ ಮಕ್ಕಳು 'ಸಾಗರದಾಚೆಗೆ ಹಾರಿಹೋಗಿ, ಇಲ್ಲಿರದ ಧನವನ್ನು ಅಲ್ಲಿ ಹುಡುಕುತ್ತಾ ಹೋದರೆಂದು ಅರ್ಥವಾಗದೆ ಹೃದಯ ತಳಮಳಗೊಳ್ಳುತ್ತಿತ್ತು. "ಹುಡುಕಾಟ"ವೇ ಜೀವನದ ಹಾದಿಯಲ್ಲವೇ?

ಈ ಸಂಚಿಕೆಯ ಶೀರ್ಷಿಕೆ "ಕೌಬಾಯ್ ನಾಡಿನಲ್ಲೂ ಕನ್ನಡದ ಕಲರವ". ಅದ್ಭುತ! ಇದರ ಸೃಷ್ಟಿಕರ್ತರಿಗೆ ನನ್ನ ಮನಃಪೂರ್ವಕ ಅಭಿನಂದನೆಗಳು. ಪರಿಮಳ ಭರಿತ 'ಕಂಪು' ನೋಡಿ, ಒಳಗೆ ಅಡಗಿದ್ದ ಲೇಖನಗಳನ್ನು ಓದಿದಾಗ ನನಗಾಯಿತು ಸಮಾಧಾನ. ಸಪ್ತಸಾಗರದಾಚೆ ವಾಸ್ತವ್ಯ ಹೂಡಿದ್ದರೂ, ನಿಮ್ಮ ಮಾತೃಭಾಷೆ, ಸಂಸ್ಕೃತಿ, ಸಭ್ಯತೆ, ಸನ್ನಡತೆ, ಒಟ್ಟಾರೆ 'ಕನ್ನಡತನವನ್ನು' ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವುದು, 'ಎಲ್ಲೇ ಇರು, ಹೇಗೇ ಇರು' ಆದರೆ 'ಕನ್ನಡ ಮರೆಯದಿರು" ಎಂಬ ಹೇಳಿಕೆಯನ್ನು ಸಾಬೀತು ಮಾಡಿದ್ದೀರಿ.

ನಿಮಗೆ, ನಿಮ್ಮ ಕುಟುಂಬದವರಿಗೆ ಹಾಗೂ ಇತರ ಕನ್ನಡ ಬಂಧುಗಳಿಗೆ ನಮ್ಮ ಹೃತ್ಪೂರ್ವಕ ಶುಭಕಾಮನೆಗಳು. ಆ ಪರಮಾತ್ಮ ನಿಮಗೆ ಶುಭವನ್ನು ಕರುಣಿಸಲಿ ಎಂಬುದೇ ನಮ್ಮ ಪ್ರಾರ್ಥನೆ.

ವನಜರಾಜನ್

Dear ಕಂಪು ಬಳಗ,

You surprised me a lot today. It was a pleasant surprise to receive a physical copy of ಕಂಪು in today's mail. Thank you very much for sending me a copy. ನೀವು ಎಲ್ಲವನ್ನೂ ತುಂಬಾ ಸೊಗಸಾಗಿ ಮಾಡಿದ್ದೀರ. It must have taken quite an amount of time to compile all this together. Cover page ನಲ್ಲಿ ಮೈಸೂರು ಪೇಟ, cowboy hat idea ತುಂಬಾ ಚೆನ್ನಾಗಿದೆ. Thanks again.

**- Sindhu Srinath, Chitradurga**

## ಮೊಳಕೆ ಕಾಳುಗಳ ನುಚ್ಚಿನುಂಡೆ

- ಮಂಜುಳ ಕೃಷ್ಣಪ್ಪ





**ಬೇಕಾಗುವ ಸಾಮಾನು:**

ಹುರಳಿಕಾಳು ೧ ಕಪ್ಪು
ಹೆಸರುಕಾಳು ೧ ಕಪ್ಪು
ಅಲಸಂದೆಕಾಳು ೧ ಕಪ್ಪು
ಹಸಿಮೆಣಸಿನಕಾಯಿ ೬
ತೆಂಗಿನತುರಿ ೧ ಕಪ್ಪು
ಕರಿಬೇವು ಸ್ವಲ್ಪ
ಕೊತ್ತಂಬರಿಸೊಪ್ಪು ಸ್ವಲ್ಪ
ಉಪ್ಪು ರುಚಿಗೆ ತಕ್ಕಷ್ಟು
ಇಂಗು ಎರಡು ಚಿಟಿಕೆ

**ಮಾಡುವ ವಿಧಾನ:**

ಎರಡು ದಿನಗಳ ಮುಂಚೆಯೆ ಕಾಳುಗಳನ್ನು ನೀರಿನಲ್ಲಿ ನೆನಸಿ, ಕಾಳುಗಳು ನೆನೆದ ನಂತರ ನೀರನ್ನು ತೆಗೆದು ಬಟ್ಟೆಯಲ್ಲಿ ಕಟ್ಟಿ ಅಥವ ಡಬ್ಬಿಯಲ್ಲಿ ಭದ್ರವಾಗಿ ಇಡಬೇಕು. ಮೊಳಕೆ ಬಂದ ನಂತರ ಎಲ್ಲಾ ಕಾಳುಗಳು, ಕರಿಬೇವು ಹಾಗೂ ಹಸಿರು ಮೆಣಸಿನಕಾಯಿ ಹಾಕಿ ಸಣ್ಣಗೆ ಸ್ವಲ್ಪ ಗಟ್ಟಿಯಾಗಿ ರುಬ್ಬಿಸಿಕೊಳ್ಳಬೇಕು. ನಂತರ ಒಂದು ಪಾತ್ರೆಗೆ ರುಬ್ಬಿದ ಹಿಟ್ಟು, ತೆಂಗಿನಕಾಯಿ, ಕೊತ್ತಂಬರಿಸೊಪ್ಪು, ಇಂಗು ಮತ್ತು ಉಪ್ಪು ಸೇರಿಸಿ ಸಣ್ಣ ಉಂಡೆ ಮಾಡಿ ಹಬೆಯಲ್ಲಿ ಬೇಯಿಸಬೇಕು. ಬಿಸಿಯಾಗಿರುವಾಗಲೆ ತುಪ್ಪ, ಪುದಿನ ಅಥವ ತೆಂಗಿನಕಾಯಿ ಚಟ್ನಿಯೊಂದಿಗೆ ಸೇವಿಸಿದರೆ ತುಂಬ ರುಚಿಯಾಗಿರುತ್ತದೆ. ಇದು ಪ್ರೋಟೀನ್ ಯುಕ್ತವಾಗಿರುವುದರಿಂದ ಹಾಗು ಎಣ್ಣೆ, ತುಪ್ಪ ಹೆಚ್ಚಿಗೆ ಇಲ್ಲದಿರುವುದರಿಂದ ಆರೋಗ್ಯಕ್ಕು ಸಹ ಬಹಳ ಒಳ್ಳೆಯದು.

ಮುಂದಿನ ಸಂಚಿಕೆಯನ್ನು ದೀಪಾವಳಿ-2013 ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು kampu.mkant@gmail.com ವಿಳಾಸಕ್ಕೆ ಕಳುಹಿಸಿ.